doc-572
T-P-2

Reg No B G 155 27 — 10 —72

In The State First Golden Jubilee Celebrated Paper 'Satyavadi' daily, Mysore 4

ಸತ್ಯವಾದಿ

ಮೈಸೂರು ದಸರಾ ವಸ್ತುಪ್ರದರ್ಶನ ಮತ್ತು ಕೈಗಾರಿಕಾ ಮೇಳ 1972

ಸಾಂಸ್ಕೃತಿಕ ಕಾರ್ಯಕ್ರಮ 28–10–197 ನಿವಾರ

ಕಲಾಕ್ಷೇತ್ರ

6 ರಿಂದ 7 ಸಂಜೆ — ಶ್ರೀಮತಿ ಎಂ. ವಿ. ರಾಘವೇಂದ್ರ, ಮೈಸೂರು ಸಂಗೀತ

7 — ಶ್ರೀ ಶಾರದ ಸಂಗೀತ ನಾಟಕ ಮಂಡಳಿ, ಗೋಕಾಕ್ "ಬಂಜೆತೊಟ್ಟಿಲು" ವಿಶೇಷ ನಾಟಕ

ಜೀವನರಾಯನ ಕಟ್ಟೆ

7 ರಿಂದ 8 ರಾತ್ರಿ ಶ್ರೀಮತಿ ಎಂ. ಎಲ್. ಶಿವಯ್ಯ, ಮೈಸೂರು ಸಂಗೀತ

8 ರಿಂದ 9–30 ರಾತ್ರಿ ಶ್ರೀಮತಿ ಎಲ್. ಪ್ರೇಮಾನಂದ್ ಮೈಸೂರು ಸಂಗೀತ

ವುಡ್‌ಲಾಂಡ್ಸ್ 27–10–72 ರಿಂದ ಆಮೋಘ 5ನೇ ವಾರ

ರಾಜೇಂದ್ರ ಕುಮಾರ್ ಆರ್ಪಿಸುವ ರೋಸ್ ಮೂವೀಸ್‌ರವರ ಹಿಂದಿ ಕಲರ್ ಅತ್ಯಮೋಘ ಚಿತ್ರ

ಜವಾನಿ ದಿವಾನಿ

ಪಾತ್ರ – ರಣಧೀರ್ ಕಪೂರ್, ಜಯಬಾಧುರಿ ದಿನ 3 ಪ್ರದರ್ಶನಗಳು

ಬೆಳಗಿನ ಪ್ರದರ್ಶನ 10–30 ಕ್ಕೆ ಮೇಯರ್ ಮುತ್ತಣ್ಣ

ಅಪೂರ್ವ 2 ನೇ ವಾರ ಬಾಂಧವ್ಯ

ಪಾತ್ರ – ಅಶ್ವತ್ಥ್, ಗಂಗಾಧರ್, ರಾಜೇಶ್, ಬಿ. ವಿ. ರಾಧ, ಪಂಡರೀಬಾಯಿ, ಸಂಧ್ಯಾರಾಣಿ, ಜಯಶ್ರೀ, ರಮಾದೇವಿ ದಿನ 3 ಪ್ರದರ್ಶನಗಳು

Edited Printedand Published by Dharmapracharanirata M S Krishna Rao (Propretor) at the Satvavad Press Chamarajapuram Mysore

ಸರಕಾರಿ ನೌಕರರಿಗೆ ದೀಪಾವಳಿ ಉಡುಗೆರೆ

ಬೆಂಗಳೂರು– ರಾಜ್ಯಸರಕಾರವು ತನ್ನ ನೌಕರರಿಗೆ ಮತ್ತು ನೆರವು ಪಡೆಯುತ್ತಿರುವ ಸಂಸ್ಥೆಯಲ್ಲಿನ ರೂ. 500 ಕ್ಕಿಂತ ಕಡಮೆ ಸಂಬಳ ಪಡೆಯುವವರಿಗೆ ರೂ. 7 ರಿಂದ 10 ರವರೆಗೆ ತುಟ್ಟಿಭತ್ಯ ಹೆಚ್ಚಿಸಿದೆ.

ಸರ್ಕಾರಿ ಜೀಪ್‌ನಲ್ಲಿ ಅಕ್ಕಿ ಸಾಗಾಣಿಕೆ

ಕಾರವಾರ— ಆಹಾರ ಮತ್ತು ಸಿವಿಲ್ ಸಪ್ಲೈ ಇಲಾಖೆಗೆ ಸೇರಿದ ಒಂದು ಜೀಪಿನಲ್ಲಿ 6 ಕ್ವಿಂಟಾಲ್ ಅಕ್ಕಿಯನ್ನು ಗಡಿಭಾಗದಲ್ಲಿ ಸಾಗಿಸುತ್ತಿದ್ದಾಗ ಹಿಡಿಯಲಾಯಿತು ಡ್ರೈವರು ಪರಾರಿಯಾದನು.

★

ಲಂಚಕೋರ ಕಾನಸ್ಟೆಬಲ್

ಬೆಂಗಳೂರು— ಬಳ್ಳಾರಿ ಜಿಲ್ಲಾ ಗುಡಿಕೋಟೆ ಪೋಲೀಸು ಸ್ಟೇಷನ್ನಿನ ಹೆಡ್ ಕಾನಸ್ಟೆಬಲು ರೂ. 150 ಲಂಚ ಸ್ವೀಕರಿಸುತ್ತಿದ್ದಾಗ ಹಿಡಿಯಲ್ಪಟ್ಟನು.

○

ಅರಮನೆ ವಶಪಡಿಸಿಕೊಳ್ಳುವ ಆರ್ಡರ್ ವಜಾ

ಕೊಚ್ಚಿ— ಕೊವಲಂನಲ್ಲಿ ಮಹಾರಾಣಿಯವರ ಅರಮನೆಯನ್ನು ವಶಪಡಿಸಿಕೊಳ್ಳುವಂತೆ ಜಿಲ್ಲಾ ಕಲೆಕ್ಟರು ಮಾಡಿದ್ದ ಆಜ್ಞೆಯನ್ನು ಹೈ ಕೋರ್ಟು ವಜಾಮಾಡಿತು – ಮಹಾರಾಣಿಯವರು ರಿಟ್ ಅರ್ಜಿ ಹಾಕಿದ್ದರು.

●

ನಿವೇಶನಗಳ ಹಂಚಿಕೆ

5 ರಾಜ್ಯಗಳ ಭೂ ರಹಿತ ಕಾರ್ಮಿಕರಿಗೆ 156652 ಮನೆ ನಿವೇಶನಗಳನ್ನು ಒದಗಿಸಲು ಕೇಂದ್ರ ವಸತಿ ಸಚಿವಾಲಯವು ಹೊಸ ಯೋಜನೆ ತಯಾರಿಸಿದೆ. ಇದಕ್ಕಾಗಿ ರೂ 397.60 ಲಕ್ಷ ಮಂಜೂರ್ಮಾಡಿದೆ ಈ ಪೈಕಿ ಮೈಸೂರಿಗೆ 7984 ನಿವೇಶನಗಳು ಇದಕ್ಕಾಗಿ ರೂ. 14.36 ಲಕ್ಷ ಮಂಜೂರಾಗಿದೆ.

○

ರೂ. 15 ಕೋಟಿ ಸಾಲ

ಬೆಂಗಳೂರು— ಇನ್ನೂ ರಾಷ್ಟ್ರೀಕರಣವಾಗದಿರುವ ಮಾರ್ಗಗಳ ಒಂದು ಭಾಗವನ್ನು ವಹಿಸಿಕೊಳ್ಳಲು ರಾಜ್ಯದ ಸಾರಿಗೆ ಸಂಸ್ಥೆ ರೂ. 15 ಕೋಟಿ ಸಾಲ ಎತ್ತುವುದಾಗಿ ಸಾರಿಗೆ ಮಂತ್ರಿ ಶ್ರೀ ಅಜೀಜ್‌ಸೇಟ್ ರವರು ಹೇಳಿದರು.

●

ಭೂಮಿ ಆಕ್ರಮಣ

ಚಿಕ್ಕಬಳ್ಳಾಪುರ — ಭೂಮಿ ಆಕ್ರಮಣ ಚಳವಳಿಯಲ್ಲದೆ, 52 ಮಂದಿ ರೈತರು ಮಾರಕ್ಕಿಸ್ವರ ನೇತೃತ್ವದಲ್ಲಿ ಈ ತಾಲ್ಲೂಕಿನ ತಿಮ್ಮನಹಳ್ಳಿಯಲ್ಲಿ ಭೂಮಿಯನ್ನು ಬಲಾತ್ಕಾರವಾಗಿ ವಶಪಡಿಸಿಕೊಳ್ಳಲು ಪ್ರಯತ್ನಿಸಿದಾಗ ಅವರನ್ನು ದಸ್ತಗಿರಿ ಮಾಡಿ ನಂತರ ಬಿಡಲಾಯಿತು.

○

ಭೂರಹಿತ ಕಾರ್ಮಿಕರ ಬಂಧನ

ಶ್ರೀ ಎ. ಕೆ. ಗೋಪಾಲ್ ಪ್ರಾರಂಭಿಸಿದ ಭೂ ಆಕ್ರಮಣ ಸಂದರ್ಭದಲ್ಲಿ ಶಿಡ್ಲಘಟ್ಟ ತಾಲ್ಲೂಕು ವಂದನಾಯಕನಹಳ್ಳಿಯಲ್ಲಿ ನೂರು ಮಂದಿ ಭೂ ರಹಿತ ಕಾರ್ಮಿಕರ ಬಂಧನವಾಯಿತು.

○

ಮುಷ್ಕರ ಆರಂಭ

ತಮ್ಮ ಕೇಳಿಕೆ ನೆರವೇರಲು ಮೈಸೂರು ನಗರದ ಆಯುರ್ವೇದ ಪದವೀಧರ ವಿದ್ಯಾರ್ಥಿ ಸಂಘ ಹಾಗೂ ಹೌಸ್ ಸರ್ಜನರು ನಿನ್ನೆಯಿಂದ ಮುಷ್ಕರಿಸಿರುವರು.

●

ದೇವರ ಇರುವಿಕೆ

ತಾನು ಆಗಸ್ಟಿನಲ್ಲಿ ಚಂದ್ರನ ವೃತ್ತದ ಮೇಲೆ ಇಳಿದಾಗ, ತಮಗೆ ದೇವರ ಇರುವಿಕೆಯ ನಿಜವಾದ ಭಾವನೆ ಉಂಟಾದುದಾಗಿ ಅಮೇರಿಕಾದ ಗಗನಪ್ರವಾಸಿ ಜೇಂಸ್ ಇರ್ವಿ ಹೊಂಕಾಂಗಿನಲ್ಲಿ ನುಡಿದರು.

★

ಸಾರಿಗೆ ನೌಕರರಿಗೆ ಬೋನಸ್ಸ್

ಬೆಂಗಳೂರು— ರಾಜ್ಯದ ಸಾರಿಗೆ ನೌಕರರಿಗೆ ದೀಪಾವಳಿ ಹಬ್ಬಕ್ಕೆ ಮು ಮಿ 8.33 ಬೋನಸ್ ಕೊಡಲಗುತ್ತೆಂದು ಸಾರಿಗೆ ಫೆಡರೇಷನ್ ಪ್ರತಿನಿಧಿಗಳು ಸಾರಿಗೆ ಮಂತ್ರಿಗಳನ್ನು ಕಂಡಾಗ ತಿಳಿಸಲಾಯಿತೆಂದು ಗೊತ್ತಾಗಿದೆ.

○

ಕೂಲಿಗಳ ಮುಷ್ಕರ

ಹುಬ್ಬಳ್ಳಿ— ಹೆಚ್ಚಿಗೆ ಕೂಲಿಗಾಗಿ ಕೇಳಿಕೆ ಹಾಕಿ, ವ್ಯವಸಾಯ ಉತ್ಪಾದನೆಯಾ ಮಾರುಕಟ್ಟೆ ಭಾಗವಲ್ಲಿಯ 300 ಕೂಲಿಗಳು ಅನಿರ್ದಿಷ್ಟ ಕಾಲ ಮುಷ್ಕರಿಸಿದ್ದಾರೆ.

●

ಸ್ಪೆಷಲ್ ವಾರ್ಡುಗಳು

ಬೆಂಗಳೂರು— ಸಾಧಾರಣ ಮಾನವನ ಹಿತದೃಷ್ಟಿಯಿಂದ ಆಸ್ಪತ್ರೆಗಳಲ್ಲಿ ಸ್ಪೆಷಲ್ ವಾರ್ಡುಗಳನ್ನು ರದ್ದುಪಡಿಸಬೇಕೆಂದು ಅರ್ಥಮಂತ್ರಿ ಶ್ರೀ ಘೋರ್ಪಡೆ ಹೇಳಿದರು.

ಕೇಂದ್ರ ಸಲಹೆ ತಿರಸ್ಕಾರ— ತ್ರಿವೇಂಡ್ರಂ ವಾರ್ತೆ ; ರಾಜ್ಯದಲ್ಲೇ ಹೆಚ್ಚು ಹಣ ಒದಗಿಸಿಕೊಳ್ಳುವಂತೆ ಕೇಂದ್ರ ಆರ್ಥ ಸಚಿವಾಲಯ ಮಾಡಿದ ಸಲಹೆಯನ್ನು ಸರಕಾರ ತಿರಸ್ಕರಿಸಿದೆ ಎಂದು ಕೇರಳ ಶಾಸನ ಸಭೆಯಲ್ಲಿ ಮುಖ್ಯಮಂತ್ರಿಗಳು ತಿಳಿಸಿದರು.

SHAKTI SUDHA

A Superb Tonic

ಭಾರತದಲ್ಲಿ ಗೋವಧೆ



ಪೂರ್ಣ ನಿಶೇಧವಾಗಲಿ

' ಮಾನವನು ಕೀಳು ಸೃಷ್ಟಿಯ ಧಣಿ, ಶ್ರಿಷ್ಠನೆನ್ನುವುದ ಸಂಕ್ಕಿನ' ಕಲ್ಪನೆ ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯಹ ಧರ್ಮಕರ್ತ

— ಮಹಾತ್ಮಾ ಗಾಂಧಿ

ಈದೇಶ ಹೊತ್ತ ಚಿತ್ರ ಸಂದೇಶ್ ರವರ ಜೊಳ್ಳಲು ಚಿತ್ರ

ಆ ನೆ - ಹು ಡು ಗ

ಹತ್ತು ದಿನಗಳೊಳಗೆ ಕುರೂಪಿ ಹೋಗಿ ಅತಿ ಸುಂದರಿ

ಜರ್ಮನಿಯಲ್ಲಿ ಮಹಿಳೆಯರನ್ನು ಸುಂದರಿಯನ್ನಾಗಿ ಮಾರ್ಪಡಿಸಲು ಒಂದ ಫಾರಂ ಇದೆ ; ಇಲ್ಲಿ ಎಂತಹ ವಿರೂಪಿ ಮಹಿಳೆ ಹೋದರೂ ಹತ್ತು ದಿವಸಗಳೊಳಗೆ ಸುಂದರಿಯಾಗಿ ಬರುವಳು ; ಹದಿನಾಲ್ಕು ದಿವಸಗಳ ಒಂದು ವರಸೆಯು ಖರ್ಚು 850 ಮಾರ್ಕ್ಸ್. ಈ ಫಾರಂಗಳು ಶಹರಿನಿಂದ ತುಂಬಾ ದೂರದಲ್ಲಿವೆ ; ಸುತ್ತಲೂ ರಮ್ಯವಾದ ಪ್ರಕೃತಿ ಸೌಂದರ್ಯದಿಂದ ತುಂಬಿವೆ ; ನಾರ್ತ್ ಸಿ ಐಲೆಂಡ್ ಆಫ್ ಸಿಲ್ಟ್, ಕೊನ್‌ಸ್ಟೆನ್ಸ್ ಕೆರೆಯ ದಡದಲ್ಲಿ, ಇಲ್ಲವೆ ಬೆವೆರಿಯಾದ ಪರ್ವತ ಪ್ರದೇಶವಾದ ಟಿಗರ್ನ್‌ಸೀಯಲ್ಲಿ ಈ ಫಾರಂಗಳಿವೆ. (ಐ-ಪಿ ಎಫ್)

ಇದೊಂದು ಗೋಳು

ನವದೆಹಲಿ— ಕುಟುಂಬ ಯೋಜನಾ ಕ್ರಮ ಅನುಸರಿಸದಿರುವ ಸಂಸಾರಗಳ ಮೆಲೆ ಕ್ರಮ ಕೈಗೊಳ್ಳುವುದಾಗಿ ಸಿಂಗಪುರ ಸರಕಾರ ಬೆದರಿಕೆ ಹಾಕಿದೆ.

ಪೋಲೀಸು ಗೋಳೀಬಾರು

ಮಧುರೈ— ಬೋದಿನಾಯಕನೂರಿನಲ್ಲಿ ಎಂ. ಜಿ. ಆರ್. ಪರ ಮತ್ತು ವಿರುದ್ಧಗಳಲ್ಲಿಯ ಘರ್ಷಣೆ ಸಂಬಂಧದಲ್ಲಿ ಪೋಲೀಸರು ಮಾಡಿದ ಗೋಳೀಬಾರಿನಿಂದ ಇಬ್ಬರು ಸತ್ತು 38 ಮಂದಿ ಗಾಯಗೊಂಡರು.

ಆಹಾರಧಾನ್ಯ ವಶ

ಶಿವಮೊಗ್ಗಾ— ಜಿಲಾ ಮ್ಯಾಜಿಸ್ಟ್ರೇಟರು ಮತ್ತು ಪೋಲೀಸು ಸೂಪರಿಂಟೆಂಡೆಂಟರು ಶಿವಮೊಗ್ಗಾ, ಭದ್ರಾವತಿ, ಚನ್ನಗಿರಿಯಲ್ಲಿನ ಅಕ್ಕಿ ಗಿರಣಿಗಳ ಮೇಲೆ ಧಾಳಿ ನಡೆಸಿ, ರೂ 2 ಲಕ್ಷ ಬೆಲೆಯ ಆಹಾರಧಾನ್ಯಗಳನ್ನು ವಶಪಡಿಸಿಕೊಂಡರು.

Contribute Liberally to the National Defence Fund

Quality Printing Neat Binding

Lakshminarasimha Press

Sivarampet, Mysore

Help The Gorakshana

— Humanitarian Propoganda Monthly ....

Protect the Cow

Bank Road Bahusar A Fair Price Shop in Actual Practice